ಚಿಕ್ಕಮ್ಮ ತನ್ನ ನಾಲಿಗೆ ಕತ್ತಿಯನ್ನು ಪ್ರಯೋಗಿಸುತ್ತಿರಲಿಲ್ಲ. ಆದರೆ ಅವಳ ಕಷ್ಟವನ್ನು ಶಮನಗೊಳಿಸಿಕೊಳ್ಳುವ ಈ ಉಪಾಯ ಅವಳು ಅಳುವುದಕ್ಕಿಂತ ಎಷ್ಟೋ ವಾಸಿಯಾಗಿತ್ತು.

ಆ ಇಡೀ ಕುಟುಂಬದಲ್ಲಿ ಆ ಚಿಕ್ಕಮ್ಮನ ಬಗೆಗೆ ಬುದ್ಧಿರಾಮನ ಚಿಕ್ಕಮಗಳು ಪುಟ್ಟಿಗೆ ಮಾತ್ರ ಪ್ರೀತಿ ಇದ್ದಿತು. ಪುಟ್ಟಿ ತನ್ನ ಸಹೋದರರ ಕಾಟದಿಂದ ತಪ್ಪಿಸಿಕೊಳ್ಳಲು ತನ್ನ ಪಾಲಿನ ಮಿಠಾಯಿಯನ್ನು ಮುದಿಚಿಕ್ಕಮ್ಮನ ಹತ್ತಿರ ಕುಳಿತು ತಿನ್ನುತ್ತಿದ್ದಳು. ಇದೇ ಅವಳ ರಕ್ಷಣಾ ಸ್ಥಾನವಾಗಿದ್ದಿತು. ಮುದಿಚಿಕ್ಕಮ್ಮನ ಆಶೆಬುರುಕುತನದಿಂದಾಗಿ ಈ ಆಶ್ರಯ ಬಹಳ ತುಟ್ಟಿಯಾಗಿದ್ದರೂ ಅಣ್ಣ ತಮ್ಮಂದಿರ ಅನ್ಯಾಯಕ್ಕಿಂತ ಎಷ್ಟೋ ಮೇಲಾಗಿತ್ತು. ಇಬ್ಬರ ಈ ಸ್ವಾರ್ಥ ಪರಸ್ಪರ ಸಹಾನುಭೂತಿ ಎಂದೆನಿಸಿಕೊಂಡಿತ್ತು.

ರಾತ್ರಿಯ ಸಮಯ ಬುದ್ಧಿರಾಮನ ಮನೆಯ ಮುಂದೆ ವಾದ್ಯವಾಗುತ್ತಿತ್ತು. ಮಕ್ಕಳ ಸಮೂಹ ಆಶ್ಚರ್ಯದಿಂದ ಆ ವಾದ್ಯದ ರಸಾಸ್ವಾದನೆ ಮಾಡುತ್ತಿತ್ತು. ಮಂಚದ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದ ಅತಿಥಿಗಳು ಆಳುಗಳಿಂದ ಕಾಲೊತ್ತಿಸಿಕೊಳ್ಳುತ್ತಿದ್ದರು. ಹತ್ತಿರದಲ್ಲೇ ನಿಂತಿದ್ದ ಹೊಗಳುಭಟ್ಟರು ಹಾಡಿ ಹೊಗಳುತ್ತಿದ್ದರು. ರಸಿಕರು ಅವರನ್ನು ಪ್ರಶಂಸಿಸುತ್ತಿದ್ದರು. ಆಳುಗಳು ಆ ಪ್ರಶಂಸೆಗೆ ತಾವೇ ನಿಜವಾದ ಅಧಿಕಾರಿಗಳು ಎಂದು ತಿಳಿಯುತ್ತಿದ್ದರು. ಒಂದೆರಡು ಇಂಗ್ಲಿಷ್ ಓದಿದ್ದ ನವಯುವಕರು ಇದರ ಬಗೆಗೆ ಉದಾಸೀನರಾಗಿದ್ದರು. ಅವರು ಈ ಹಳ್ಳಿಯ ಸಭೆಯಲ್ಲಿ ಮಾತಾಡುವುದು ಅಥವಾ ಭಾಗವಹಿಸುವುದು ತಮ್ಮ ಪ್ರತಿಷ್ಠೆಗೆ ಕುಂದು ಎಂದು ತಿಳಿದಿದ್ದರು.

ಇವತ್ತು ಬುದ್ಧಿರಾಮನ ಹಿರೀ ಮಗನ ಹುಟ್ಟುಹಬ್ಬ. ಇಂದು ಅವನದೇ ಸಮಾರಂಭ. ಕೆಲವು ಹೆಂಗಸರು ಒಳಗಡೆ ಹಾಡುತ್ತಿದ್ದರು. ರೂಪ ಅತಿಥಿಗಳಿಗೆ ಊಟದ ಏರ್ಪಾಟಿನಲ್ಲಿ ತೊಡಗಿದ್ದಳು. ಒಲೆಗಳ ಮೇಲೆ ಪಾತ್ರೆಗಳನ್ನು ಏರಿಸಿದ್ದರು. ಒಂದರಲ್ಲಿ ಪೂರಿ, ಮತ್ತೊಂದರಲ್ಲಿ ಕರ್ಜಿಕಾಯಿಗಳನ್ನು ಕರಿಯುತ್ತಿದ್ದರು. ಇನ್ನೊಂದರಲ್ಲಿ ಬೇರೆ ಅಡಿಗೆಗೆ ಇಟ್ಟಿದ್ದರು. ಒಂದು ದೊಡ್ಡ ಪಾತ್ರೆಯಲ್ಲಿ ಮಸಾಲೆ ಸಾಮಾನು, ತರಕಾರಿ ಬೇಯಿಸುತ್ತಿದ್ದರು. ಮಸಾಲೆ ಪದಾರ್ಥ ಮತ್ತು ತುಪ್ಪದ ವಾಸನೆ ಹಸಿವನ್ನು ಹೆಚ್ಚಿಸುತ್ತಿತ್ತು.

ಮುದಿಚಿಕ್ಕಮ್ಮ ತನ್ನ ಕೋಣೆಯಲ್ಲಿ ದುಃಖದಿಂದ ಕುಳಿತಿದ್ದಳು. ಈ ಸುವಾಸನೆ ಅವಳನ್ನು ಅಶಾಂತಗೊಳಿಸುತ್ತಿತ್ತು. ನನಗೆ ಬಹುಶಃ ಪೂರಿಗಳು ತಿನ್ನುವುದಕ್ಕೆ ಸಿಗುವುದಿಲ್ಲ. ಇಷ್ಟು ಹೊತ್ತಾಗಿದೆ, ಇನ್ನೂ ಊಟ ತಂದಿಲ್ಲ. ಎಲ್ಲರದ್ದೂ ಊಟ ಆಗಿರಬಹುದು. ನನಗೇನು ಉಳಿಸಿರಲಾರರು. ಹೀಗೆ ಯೋಚಿಸಿದ ಕೂಡಲೆ ಅಳು ಬಂತು, ಆದರೆ ಅಳುವುದು ಅಪಶಕುನವೆಂದು ತಡೆದುಕೊಂಡಳು.

ಅಬ್ಬ! ಎಂಥ ಘಮಘಮ ವಾಸನೆ! ನನ್ನ ಯಾರು ಕೇಳುತ್ತಾರೆ? ರೊಟ್ಟಿ ಸಿಗುವುದೇ ದುರ್ಲಭ ಆಗಿರುವಾಗ ನನಗೆ ಪೂರಿ ಸಿಗುತ್ತದೆಯೇ? ಆ ಅದೃಷ್ಟ ಎಲ್ಲಿ! ಪುನಃ ಅಳು ಬರುವಂತಾಯಿತು. ಆದರೆ ರೂಪಳ ಭಯದಿಂದ ಪುನಃ ಮೌನ ಧರಿಸಿದಳು.

ಇದೇ ದುಃಖಕರವಾದ ವಿಚಾರದಲ್ಲಿ ಮುಳುಗಿಹೋಗಿದ್ದಳು ಮುದಿಚಿಕ್ಕಮ್ಮ. ತುಪ್ಪ, ಮಸಾಲೆಯ ವಾಸನೆ ಮೂಗಿಗೆ ಬಡಿದೂ ಬಡಿದೂ ಅವಳಿಗೆ ಕೋಪ ಬರಿಸತೊಡಗಿತ್ತು, ಬಾಯಿಯಲ್ಲಿ ನೀರೂರುತ್ತಿತ್ತು. ಪೂರಿ ಸಾಗುವಿನ ರುಚಿ ನೆನೆಸಿಕೊಂಡಾಗಲೆಲ್ಲಾ ಏನೋ ಒಂದು ತರಹದ ಖುಷಿಯಾಗುತ್ತಿತ್ತು. ಯಾರನ್ನು ಕೂಗಲಿ? ಇವತ್ತು ಪುಟ್ಟಿ ಕೂಡ ಬರಲಿಲ್ಲ. ಎರಡು ಹುಡುಗರು ಯಾವಾಗಲೂ ಸತಾಯಿಸುತ್ತಾ ಇರುತ್ತಾರೆ. ಇವತ್ತು ಅವರೂ ಕೂಡ ಬಂದಿಲ್ಲ. ಏನು ಅಡುಗೆ ಮಾಡ್ತಾ ಇದ್ದಾರೆ ಎಂದು ಗೊತ್ತಾಗಿದಿದ್ದರೆ ಚೆನ್ನಾಗಿರುತ್ತಿತ್ತು.